ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ತಾಂಶಿನಿ 02 ಸಿಡಿಸಿ(1) 2019–20

ನಿರ್ದೇಶಕರ ಕಾರ್ಯಾಲಯ
ಅರಮನೆ ರಸ್ತೆ, ಬೆಂಗಳೂರು–560 001.
ದಿನಾಂಕ: 24–04–2019.

ಜ್ಞಾಪನ

ವಿಷಯ: ಕರ್ನಾಟಕ ಪಬ್ಲಿಕ್ ಶಾಲೆಗಳ 11 ಮತ್ತು 12ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯೊಂದಿಗೆ 'ವೃತ್ತಿ ಕೌಶಲ್ಯ' ತರಬೇತಿಯನ್ನು ಪಾಲಿಟೆಕ್ನಿಕ್ ಸಹಯೋಗದೊಂದಿಗೆ ನೀಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಪತ್ರ ಸಂ: ಪಪೂಶಿಇ / ಶೈಶಾ / 04 / ಆಯ.ಘೋ.ಕ್ರಿಯೋ / 2018–19, ದಿನಾಂಕ: 22/04/2019.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು 2019–20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧವಾಗಿ ಕರ್ನಾಟಕ ಸರ್ಕಾರದ 176 ಕರ್ನಾಟಕ ಪಬ್ಲಿಕ್ ಶಾಲೆಗಳ 11 ಮತ್ತು 12ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯೊಂದಿಗೆ ವೃತ್ತಿ ಕೌಶಲ್ಯವನ್ನು ಪಾಲಿಟೆಕ್ನಿಕ್ ಸಹಯೋಗದೊಂದಿಗೆ ತರಬೇತಿ ನೀಡಲು ಯೋಜನೆಯನ್ನು ರೂಪಿಸುವಂತೆ ಕೋರಿರುತ್ತಾರೆ. ತತ್ಸಂಬಂಧವಾಗಿ ರೂಪುರೇಷೆಗಳನ್ನು ತಯಾರಿಸುವ ಸಲುವಾಗಿ ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.

ಕ್ರ.ಸಂ	ಹೆಸರು, ಪದನಾಮ ಮತ್ತು ವಿಳಾಸ	
1	ಶ್ರೀ ರವಿಚಂದ್ರನ್ ಎನ್, ಜಂಟಿ ನಿರ್ದೇಶಕರು–ಸಿಡಿಸಿ, ತಾಂ.ಶಿ.ನಿ, ಬೆಂಗಳೂರು	ಅಧ್ಯಕ್ಷರು
2	ಶ್ರೀ ಸತ್ಯನಾರಾಯಣ ವೈ.ಕೆ, ಉಪ ನಿರ್ದೇಶಕರು–ಸಿಡಿಸಿ, ತಾಂ.ಶಿ.ನಿ, ಬೆಂಗಳೂರು	ಸದಸ್ಯ ಕಾರ್ಯದರ್ಶಿ
3	ಶ್ರೀ ಜಯರಾಮ್ ಎನ್ ಎಸ್, ಉಪನ್ಯಾಸಕರು (ಆ.ಶ್ರೇ), ಎಸ್.ಜೆ.ಪಿ ಬೆಂಗಳೂರು	ಸದಸ್ಯರು
4	ಶ್ರೀ ವೆಂಕಟೇಶ ಬಾಬು, ಉಪನ್ಯಾಸಕರು (ಆ.ಶ್ರೇ), ಸರ್ಕಾರಿ ಪಾಲಿಟೆಕ್ನಿಕ್ ರಾಮನಗರ	ಸದಸ್ಯರು
5	ಶ್ರೀ ಚಂದ್ರಶೇಖರ್, ಉಪನ್ಯಾಸಕರು (ಆ.ಶ್ರೇ), ಸರ್ಕಾರಿ ಪಾಲಿಟೆಕ್ನಿಕ್ ತುಮಕೂರು	ಸದಸ್ಯರು
6	ಶ್ರೀ ಯೋಗೀಶ ಬಾಬು, ಉಪನ್ಯಾಸಕರು (ಆ.ಶ್ರೇ), ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಬೆಂಗಳೂರು.	ಸದಸ್ಯರು
7	ಶ್ರೀಮತಿ ಹರಿತ , ಉಪನ್ಯಾಸಕರು (ಆ.ಶ್ರೇ), ಎಸ್.ಜೆ.ಪಿ ಬೆಂಗಳೂರು.	ಸದಸ್ಯರು
8	ಶ್ರೀ ಜಗದೀಶ್.ಆರ್.ಬಗಲಿ, ಉಪನ್ಯಾಸಕರು (ಆ.ಶ್ರೇ), ಸರ್ಕಾರಿ ಪಾಲಿಟೆಕ್ನಿಕ್ ಬಾಗೇಪಲ್ಲಿ	ಸದಸ್ಯರು
9	ಶ್ರೀ ಎಸ್ ಡಿ ಗೊನ್ಸಾಲ್ವಿಸ್ ಅಭಿವೃದ್ಧಿ ಅಧಿಕಾರಿ (ಸಿಡಿಸಿ) ತಾಂ.ಶಿ.ನಿ, ಬೆಂಗಳೂರು	ಸದಸ್ಯರು

ಮೇಲ್ಕಂಡ ಸಮಿತಿಯು ದಿನಾಂಕ: 30/04/2019ರಂದು ನಿರ್ದೇಶನಾಲಯದಲ್ಲಿ ಪೂರ್ವಾಹ್ನ 11.00 ಗಂಟೆಗೆ ಸರಿಯಾಗಿ ಸಭೆ ಸೇರಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಬೇಕಾಗಿರುವ ರೂಪು ರೇಷೆಗಳ ಬಗ್ಗೆ ಚರ್ಚಿಸಿ ಸಮಗ್ರ ವರದಿಯನ್ನು ನೀಡಲು ಸೂಚಿಸಿದೆ. ಮೇಲ್ಕಂಡ ದಿನದ ಕರ್ತವ್ಯವನ್ನು "ಅನ್ಯ ಕಾರ್ಯದ ಮೇರೆಗೆ" ಎಂದು ಪರಿಗಣಿಸಬಹುದಾಗಿದೆ ಮತ್ತು ಕೆ.ಸಿ.ಎಸ್.ಆರ್ ನಿಯಮಾವಳಿಗಳ ಪ್ರಕಾರ ಪ್ರಯಾಣ ಮತ್ತು ದಿನಭತ್ಯೆಗಳಿಗೆ ಅರ್ಹರಾಗಿರುತ್ತಾರೆ.

ನಿರ್ದೇಶಕರು

ಗೆ: ಮೇಲ್ಕಂಡ ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ (ಸಂಸ್ಥೆಯ ಪ್ರಾಚಾರ್ಯರ ಮುಖಾಂತರ):
ಸೂಕ್ತ ಕ್ರಮಕ್ಕಾಗಿ.

ಪ್ರತಿ: ಇ-ಆಡಳಿತ ವಿಭಾಗ, ತಾಂ.ಶಿ.ನಿ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.